**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಿ ಎನ್ ಮಂಜೇಗೌಡರವರ ನಿಯಮ 72ರ ಅಡಿಯಲ್ಲಿ ಗಮನ ಸೆಳೆಯುವ ಪ್ರಶ್ನೆಗೆ ಉತ್ತರ**

**ವಿಷಯ**

ಬೆಂಗಳೂರು ನಗರ ಜಿಲ್ಲೆಯಲ್ಲಿ ಸರ್ಕಾರಿ ಕಿವುಡ ಮತ್ತು ಮಕ್ಕಳ ವಸತಿ ಶಾಲೆ ಇಲ್ಲದ ಪ್ರಯುಕ್ತ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಹಂಸಧ್ವನಿ ವಸತಿ ರಹಿತ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು ಸರ್ಕಾರಿ ವಸತಿಯುತ ಶಾಲೆಯನ್ನಾಗಿ ದಿ:23.07.2016ರಲ್ಲಿ ಮಾರ್ಪಡಿಸಿ ಆದೇಶಿಸಲಾಗಿದೆ. ಶಾಲೆಯ ಕಟ್ಟಡವನ್ನು ಸರ್ಕಾರದ ಆದೇಶದನ್ವಯ ವಸತಿ ಶಾಲೆಯನ್ನಾಗಿ ಬೆಂಗಳೂರು ನಿರ್ಮಿತಿ ಕೇಂದ್ರದವರಿಂದ ಮಾರ್ಪಡಿಸಲಾಗಿದೆ. ವಸತಿ ಶಾಲೆಗೆ ಅವಶ್ಯವಿರುವ ಹಾಸಿಗೆ, ತಲೆದಿಂಬು, ಬೆಡ್‌ಶೀಟ್ ಮತ್ತು ಅಡುಗೆ ಸಾಮಗ್ರಿಗಳನ್ನು ಖರೀದಿಸಲಾಗಿದೆ ಮತ್ತು ಸದರಿ ಶಾಲೆಗೆ ಪ್ರತ್ಯೇಕ ಆಯವ್ಯಯವನ್ನು ನಿಗದಿಗೊಳಿಸಿದ್ದು, ಹೆಚ್ಚುವರಿ ಆಯವ್ಯಯ ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಬಗ್ಗೆ ಕಳೆದ 08 ಅಧಿವೇಶನಗಳಿಂದಲೂ ಸಚಿವರು ವಸತಿ ಶಾಲೆ ಪ್ರಾರಂಭಿಸುವುದಾಗಿ ಭರವಸೆ ನೀಡುತ್ತಾ ಬಂದಿರುತ್ತಾರೆ. ಆದರೆ ಇದುವರೆಗೂ ವಸತಿ ಶಾಲೆ ಪ್ರಾರಂಭವಾಗಿರುವುದಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಕಿವುಡ ಮತ್ತು ಮೂಕ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ವಿಷಯವನ್ನು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಉತ್ತರ**

ಸರ್ಕಾರದ ಆದೇಶ ಸಂಖ್ಯೆ: ಮಮಇ 389 ಪಿಹೆಚ್‌ಪಿ 2014, ಬೆಂಗಳೂರು, ದಿನಾಂಕ:23.07.2016 ರಲ್ಲಿ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯನ್ನು ಸರ್ಕಾರ ವಹಿಸಿಕೊಳ್ಳುವ ಇರುವ ಎಲ್ಲಾ ನಿಯಮಗಳನ್ನು ಪಾಲಿಸಿಯೇ ಸರ್ಕಾರದ ವಶಕ್ಕೆ ಪಡೆದು ಹಾಲಿ ಇರುವ ಸಿಬ್ಬಂದಿಗಳ ಸಮೇತ, ಚರ, ಸ್ಥಿರ ಆಸ್ತಿಗಳನ್ನೊಳಗೊಂಡಂತೆ ಸರ್ಕಾರಿ ವಸತಿಯುತ ಶಾಲೆಯನ್ನಾಗಿ ನಿಯಮಾನುಸಾರ ಮಾರ್ಪಡಿಸಲು ಮಂಜೂರಾತಿಯನ್ನು ನೀಡಲಾಗಿದೆ.

ಸರ್ಕಾರಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆ, ಇಂದಿರಾನಗರ, ಬೆಂಗಳೂರು ಶಾಲೆಯನ್ನು ವಸತಿಯುತ ಶಾಲೆಯನ್ನಾಗಿ ಮಾರ್ಪಡಿಸಲು ಶಾಲಾ ವಿಭಾಗಕ್ಕೆ ಹಾಗೂ ವಸತಿ ವಿಭಾಗಕ್ಕೆ ಪ್ರತ್ಯೇಕವಾಗಿ ಹುದ್ದೆಗಳ ಅವಶ್ಯಕತೆ ಇರುವುದರಿಂದ ಈಗಾಗಲೇ ಆರ್ಥಿಕ ಇಲಾಖೆಯಿಂದ ಅನುಮೋದನೆಯಾಗಿರುವ 20 ಹುದ್ದೆಗಳೊಂದಿಗೆ 12 ಹುದ್ದೆಗಳನ್ನು ಸೃಜಿಸಲು ಅನುಮತಿ ನೀಡಲು ಮತ್ತು ಹೆಚ್ಚುವರಿಯಾಗಿ ಅವಶ್ಯಕತೆಯಿರುವ ಸಾಮಗ್ರಿಗಳನ್ನು ಖರೀದಿಸಲು ಅನುದಾನವನ್ನು ಒದಗಿಸುವಂತೆ ಕೋರಿರುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.

**ಸಂಖ್ಯೆ: ಮಮಇ 131 ಪಿಹೆಚ್‌ಪಿ 2023**

(ಲಕ್ಷ್ಮೀ ಆರ್. ಹೆಬ್ಬಾಳ್ಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು